ತವರಿನವರು ಬಾಗಿನಕ್ಕೆ ನೀಡಿದ ಹಣವನ್ನು ಸಾಸಿವೆಯ ಡಬ್ಬದಲ್ಲಿ ಅಡಗಿಸಿಡುತ್ತಿದ್ದರು ಎಂದೋ ನಾನು ಹೇಳಿದಾಗಲೆಲ್ಲ ಜಗತ್ತಿನ ಅತ್ಯಾಶ್ಚರ್ಯಕರವಾದ ಸಂಗತಿಯನ್ನು ಕೇಳಿದವನಂತೆ ಲೋರೆ ಕಣ್ಣರಳಿಸುತ್ತಿದ್ದ. ಹಾಗೆಯೇ ಮಾತನಾಡುತ್ತಾ ನಾನವನಿಗೆ ನಮ್ಮೂರ ಚೌಡಿಯ ವಿಷಯ ಹೇಳಿದ್ದೆ.

ನಮ್ಮೂರ ಸುಕುಮಾರಿ, ಸುಂದರಿ ಗೌರಿ ಪರವೂರಿನ ಕೂಡುಕುಟುಂಬಕ್ಕೆ ಸೊಸೆಯಾಗಿ ಹೋಗಿದ್ದಳು. ಬೆಳಗಿನಿಂದ ಗಾಣದೆತ್ತಿನಂತೆ ದುಡಿಯುತ್ತಾ, ಎಲ್ಲರಿಗೂ ಊಟದ ಸಮಾರಾಧನೆ ಮಾಡಿ, ಹೊತ್ತಿಳಿಯುವಾಗ ಊಟ ಮಾಡುವುದರೊಳಗೆ ಹೈರಾಣಾಗುತ್ತಿದ್ದಳು. ಹಬ್ಬ ಹರಿದಿನಗಳಿಗೆ ತೌರಿಗೆ ಹೊರಡಬೇಕೆಂದರೂ ಅತ್ತೆ ಮಾವರಿಂದ ಪ್ರಾರಂಭಿಸಿ ಗಂಡನವರೆಗೆ ಅನೇಕರ ಒಪ್ಪಿಗೆಗಾಗಿ ಕಾಯಬೇಕಿತ್ತು. ನಡುವೆಲ್ಲೊ ಒಬ್ಬರಿಂದ ಏನೋ ಕಾರಣಕ್ಕೆ ನಿರಾಕರಣೆಯ ನೆವ ಬಂದು ಅವಳ ತೌರ ಕನಸು ಅಲ್ಲೇ ಮುದುಡಿಹೋಗುತ್ತಿತ್ತು. ಆ ಸಮಯದಲ್ಲಿಯೇ ಅವಳ ಮೈಮೇಲೆ ಅವಳ ತವರಿನ ಚೌಡಿ ಆವಾಹನೆಯಾಗಿ ಅಬ್ಬರಿಸಿದ್ದು. ಉಳಿದೆಲ್ಲ ದೇವರುಗಳಿಗೆ ಗಂಡಸರಿಂದ ಪೂಜೆಯಾದರೆ ನಮ್ಮ ನಮ್ಮ ಮನೆಯ ಚೌಡಿಗೆ ಮಾತ್ರ ಹೆಂಗಸರೇ ಮಡಿಯಲ್ಲಿ ಅಡುಗೆ ಮಾಡಿ ಎಡೆಯಿಡಬೇಕು. ಮನೆಯಲ್ಲೇನಾದರೂ ವಿಶೇಷಗಳಿದ್ದರೆ ಅಥವಾ ಯಾವುದಾದರೂ ವಿಷಯಕ್ಕೆ ಹರಕೆ ಹೊತ್ತಿದ್ದರೆ ಚೌಡಿಗೆ ಎಡೆಯಿಡುವ ವಾಡಿಕೆಯಿತ್ತು. ಆ ಹರಕೆಯಾದರೂ ಎಂಥದ್ದು? ಅಣ್ಣನ ಮದುವೆಗೆಂದು ಪಟ್ಟೆಸೀರೆಯನ್ನು ಹಟಮಾಡಿ ತರಿಸಿಕೊಂಡ ತಂಗಿಗೆ ಮದುವೆಯ ದಿನವೇ ಮುಟ್ಟಿನ ದಿನವಾದರೆ ಅವಳಾದರೂ ಏನು ಮಾಡಿಯಾಳು ಪಾಪ? ಆಸ್ಪತ್ರೆ, ಮಾತ್ರೆಗಳ ಪರಿಚಯವಿಲ್ಲದ ಆಕೆ ಹೇಗಾದರೂ ಈ ಸಲ ಮುಟ್ಟು ಮುಂದೆ ಹೋಗಲೆಂದು ಚೌಡಿಯ ಮೊರೆಹೋಗುತ್ತಿದ್ದಳು. ಅಪ್ಪಿತಪ್ಪಿ ಮುಟ್ಟೇನಾದರೂ ಮುಂದೆ ಹೋದರೆ ಚೌಡಿಗೊಂದು ಊಟ ಖಚಿತವಾಗಿತ್ತು. ವರ್ಷಕ್ಕೆ ಒಂದು ಡಜನ್‌ನಂತೆ ವರಗಳು ಬಂದು ನೋಡಿಹೋದರೂ ಮದುವೆ ಗೊತ್ತಾಗದ ಹುಡುಗಿಯ ತಾಯಿ ಇನ್ಯಾರ ಮೊರೆಹೋಗುತ್ತಾಳೆ? ಮಗಳಿಗೆ ಮದುವೆ ಗೊತ್ತಾದರೆ ನಾಲ್ಕು ದಿನ ಎಡೆಯಿಡುವೆ ತಾಯೆ ಎಂದು ಚೌಡಿಗೆ ಶರಣಾಗುತ್ತಿದ್ದಳು. ನಡುಬೇಸಿಗೆಯೆಂದು ಮನೆಯಲ್ಲೊಂದು ಮಂಗಲ ಕಾರ್ಯವಿಟ್ಟರೆ ಮೊದಲಿನ ದಿನವೇ ಆಗಸದ ತುಂಬೆಲ್ಲ ಮೋಡ ಹರಡಿ, ಇನ್ನೇನು ಮಳೆಸುರಿದು ಮಡಲಿನ ಚಪ್ಪರವೆಲ್ಲ ಕೊಚ್ಚಿಹೋಗುತ್ತದೆ ಎನ್ನುವ ಗಳಿಗೆಯಲ್ಲಿ ಮನೆಯ ಯಜಮಾನಿ ಮತ್ತೆ ಮೊರೆಯಿಡುತ್ತಿದ್ದುದು ಇದೇ ಚೌಡಿಗೆ. ಹೀಗೆ ಹೆಂಗಳೆಯರ ಆಪತ್ತಿಗೊದಗುವ ತಾಯಿಯಾದ ಚೌಡಿ ಗೌರಿಯ ಮೈಮೇಲೆ ಬಂದು ಅಬ್ಬರಿಸಿಯೇಬಿಟ್ಟಳು. ಅತ್ತೆಯ ಮನೆಯವರೆಲ್ಲ ಕಕ್ಕಾಬಿಕ್ಕಿಯಾಗಿ ಸುತ್ತ ನೆರೆದು, ಚೌಡಿಯ ಸಮಾಧಾನಕ್ಕೆಂದು ತೆಂಗಿನ ಕಾಯೊಂದನ್ನು ಮಂತ್ರಿಸಿಟ್ಟು ಸೊಸೆಯ ಮೈಮೇಲೆ ಬಂದ ಚೌಡಿಯನ್ನು ಬಂದ ಕಾರಣವೇನೆಂದು ವಿಚಾರಿಸಿದರು. ಪ್ರತಿಹುಣ್ಣಿಮೆಗೆ ತನಗೆ ಗೌರಿ ಕೈಯ್ಯ ಊಟವೇ ಬೇಕೆಂದು ಹಟಹಿಡಿದ ಚೌಡಿಗೆ ಎಲ್ಲರೂ ಕೈಮುಗಿದು ಅಸ್ತು ಎಂದರು. ಅಲ್ಲಿಂದ ಪ್ರಾರಂಭವಾಗಿ ಪ್ರತಿಹುಣ್ಣಿಮೆಗೂ ಗೌರಿಯೆಂಬ ಎಳೆಯ ಹೆಣ್ಣು ಮೊದಲ ದಿನವೇ ತವರಿಗೆ ಬಂದು, ಹುಣ್ಣಿಮೆಯ ದಿನ ಸಂಜೆ ಅಮ್ಮನ ಆರುಮೊಳದ ಮಡಿಯುಟ್ಟು ಚೌಡಿಗೆ ಎಡೆಯಿಟ್ಟು ನಮಿಸಿ, ಅಮ್ಮನ ಮಗ್ಗುಲಲ್ಲಿ ಮಗುವಂತೆ ಮಲಗಿ ಮತ್ತೆ ತನ್ನ ಮನೆಗೆ ಮರಳುತ್ತಿದ್ದಳು. ಕತೆ ಮುಗಿಯುವಾಗ ಲೋರೆ ಎಷ್ಟು ಪ್ರಭಾವಿತನಾಗಿದ್ದ ಎಂದರೆ ಇಂಥದೊಂದು ದೈವದ ಬಲವಿಲ್ಲದ ನಮ್ಮೂರ ಗಂಡುಗಳ ಬಗ್ಗೆ ತೀರ ಕನಿಕರಪಟ್ಟಿದ್ದ!

ಇಂಥ ವಿದ್ಯಮಾನಗಳೆಲ್ಲವೂ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತ ಭ್ರಮಾಲೋಕದ ಚಲನೆಗಳು ಹೇಗೆ ನೈಜತೆಯನ್ನು ಸೃಷ್ಟಿಸಿಬಿಡುತ್ತವೆ ಎಂಬುದನ್ನು ನಾವಿಬ್ಬರು ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಣೆ ನಡೆಸುತ್ತಿದ್ದೆವು. ಹಾಗೊಂದು ದಿನ ಲೋರೆ ನನ್ನನ್ನು ಕೇಳಿದ್ದ, "ನಿನಗೆ ಇಂಥ ಯಾವ ಭ್ರಮೆಗಳೂ ಇರಲಿಲ್ಲವೇನು?" ನಾನು ನನ್ನ ನೆನಪಿನ ಕೋಶಕ್ಕೆ ಕೈಹಾಕಿ ಹೇಳಿದ್ದೆ. "ಇಂಥದ್ದೆಲ್ಲ